**ಪಾಠ–11** **ಜೂನ್ 9–15**

# ದೇವರ ಮುದ್ರೆಯೋ ಅಥವಾ ಮೃಗದ ಗುರುತೋ?

**ಸಬ್ಬತ್ತಿನ ಮಧ್ಯಾಹ್ನ :**

**ಈ ವಾರದ ಅಧ್ಯಯನಕ್ಕಾಗಿ :** ಆದಿಕಾಂಡ 17:9–11, ವಿಮೋಚನೆಕಾಂಡ 31:13, 17; ಪ್ರಕಟಣೆ 13:17; ಎಫೆಸ 1:13,14; ಇಬ್ರಿಯರಿಗೆ 4:9,10.

***ಸ್ಮರಣ ವಾಕ್ಯ :*** **ದೇವರಾದ ಕರ್ತನೇ, ಸರ್ವಶಕ್ತನೇ, ನಿನ್ನ ಕೃತ್ಯಗಳು ಮಹತ್ತಾದವುಗಳೂ ಆಶ್ಚರ್ಯಕರವಾದವುಗಳು ಆಗಿವೆ; ಸರ್ವ ಜನಾಂಗಗಳ ಅರಸನೇ ನಿನ್ನ ಮಾರ್ಗಗಳು ನ್ಯಾಯವು ಸತ್ಯವೂ ಆಗಿವೆ: (ಪ್ರಕಟಣೆ 15:3).**

ಮೋಶೆಯ ಹಾಡು ಮತ್ತು ಯಜ್ಞದ ಕುರಿಯಾದಾತನ ಹಾಡು ನಮ್ಮ ಸ್ಮರಣ ವಾಕ್ಯದ ಸಾಲುಗಳಿಂದ ಆರಂಭವಾಗುತ್ತದೆ. ಆಗ ಮೃಗದ ವಿಗ್ರಹಕ್ಕೆ ನಮಸ್ಕರಿಸದೆಯೂ ಅದರ ಹೆಸರಿನ ಅಂಕೆಯನ್ನು ಮುದ್ರೆಹಾಕಿಸಿಕೊಳ್ಳದೆಯೂ ಅದರ ಮೇಲೆ ಜಯ ಹೊಂದಿದವರು ದೇವರ ಸೇವಾರ್ಥವಾದ ವೀಣೆಗಳನ್ನು ಕೈಯಲ್ಲಿ ಹಿಡಿದುಕೊಂಡು ಗಾಜಿನ ಸಮುದ್ರದ ಬಳಿಯಲ್ಲಿ ನಿಂತು ದೇವರ ದಾಸನಾದ ಮೋಶೆಯ ಹಾಡನ್ನು ಯಜ್ಞದ ಕುರಿಯಾದಾತನ ಹಾಡನ್ನು ಹಾಡುತ್ತಾ (ಪ್ರಕಟಣೆ 15:2) ನಾವು ಆ ಸಂಖ್ಯೆಯಲ್ಲಿ ಸೇರುವುದು ಹೇಗೆ?

ಕೊನೆಯ ಕಾಲದಲ್ಲಿ ಜೀವಿಸುವ ಜನರ ಒಂದು ಮುಖ್ಯವಾದ ಗುರುತು ಯಾವುದೆಂದರೆ ಅವರು ಮೂರನೆಯ ದೂತನ ಸಂದೇಶವನ್ನು ಸಾರುವ ವಿಧಾನವಾಗಿದೆ, ಆ ಸಂದೇಶವು ಮೃಗದ ಮುದ್ರೆಯನ್ನು ಹೊಂದುವುದರಿಂದ ದೂರವಿರುವಂತೆ ಎಚ್ಚರಿಸುತ್ತದೆ. ಸತ್ಯವೇದದಿಂದ ಎಲ್ಲಾ ವಿಧವಾದ ಎಚ್ಚರಿಕೆಗಳು ಬಂದರೂ ಕೂಡ ಅನೇಕ ವರ್ಷಗಳಿಂದ ಈ ಗುರುತು ಯಾವುದು ಎಂದು ಹಣೆಯ ಮೇಲಿನ ಗುರುತು, ನಿಮ್ಮ ಕ್ರೆಡಿಟ್ ಕಾರ್ಡ್ ಸಂಖ್ಯೆ ಅಥವಾ ಯಾವುದೋ ಬಯೋ ಮೆಟ್ರಿಕ್ ಸಂಖ್ಯೆ ಎಂದು ಅನೇಕ ಹೊಸ ವಿಷಯಗಳನ್ನು ಪರಿಚಯಿಸಿ ಜನರನ್ನು ಮರುಳುಗೋಳಿಸುತ್ತಿದ್ದಾರೆ.

ಬಾಬೇಲಿನ ವಿಷಯದಲ್ಲಿ ಅನೇಕ ಸಂಶಯಗಳು ಬಂದಾಗ ನಾವು ಆತಂಕಕ್ಕೆ ಒಳಗಾಗಬಾರದು. ಕೊನೆಗೆ ಅದರ ಹೆಸರು ಸೂಚಿಸುವ ಹಾಗೆ ಗಲಿಬಿಲಿ ಯನ್ನು ಸೂಚಿಸುತ್ತದೆ. ಆದರೆ ದೇವರ ಜನರು ಇದರ ವಿಷಯದಲ್ಲಿ ಬಹಳ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿಕೊಂದಿರುವವರು ಯಾಕೆಂದರೆ ಇದರ ಮೂಲಕವೇ ಅವರು ಮೂರನೆಯ ದೂತನ ಸಂದೇಶವನ್ನು ಶಕ್ತಿಶಾಲಿಯಾಗಿ ಸಾರುತ್ತಾರೆ. ಈ ವಾರದಲ್ಲಿ, ನಾವು ಮೃಗದ ಗುರುತು ಎಂದರೆ ಏನು ಮತ್ತು ಅದರ ಗುರುತನ್ನು ಹಾಕಿಸಿಕೊಳ್ಳದೆ ಹೇಗೆ ಇರುವುದು ಎಂಬುದರ ಕುರಿತಾಗಿ ಅಧ್ಯಯನ ಮಾಡೋಣ.

**ಈ ವಾರದ ಪಾಠವನ್ನು ಜೂನ್ 16, ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ತನ್ನ ಜನರನ್ನು ಗುರುತಿಸಲು ದೇವರ ಗುರುತು

**ಹಳೆಯ ಒಡಂಬಡಿಕೆಯ ಕಾಲದಲ್ಲಿ ನಿಜವಾದ ದೇವರ ಜನರನ್ನು ಗುರುತಿಸಲು ಎರಡು ಸೂಚನೆಗಳು ಇದ್ದವು. ಅದರಲ್ಲಿ ಒಂದು ಸುನ್ನತಿ. ಈ ಗುರುತನ್ನು ಮೊದಲು ಯಾರಿಗೆ ನೀಡಲಾಯಿತು**? ಆದಿಕಾಂಡ 17:9–11, ವಿಮೋಚನೆಕಾಂಡ 31:13,17.

ರಕ್ಷಣೆಯ ಸಂಕೇತವಾಗಿ ದೇವರು ಅಬ್ರಹಾಮ ಮತ್ತು ಆತನ ಸಂತತಿಯವರಿಗೆ ಸುನ್ನತಿ ಮಾಡಿಕೊಳ್ಳಬೇಕೆಂದು ಅಜ್ಞಾಪಿಸಿದನು. ಗಂಡುಮಕ್ಕಳು ಎಂಟನೆಯ ದಿನದಲ್ಲಿ ಸುನ್ನತಿ ಮಾಡಿಸಿಕೊಳ್ಳಬೇಕಾಗಿತ್ತು. (ಯಾಜಕಕಾಂಡ 12:3). ಆದರೂ ಕೂಡ, ಈ ಅಚಾರವು ಆಳವಾದ ಅರ್ಥವನ್ನು ಹೊಂದಿತ್ತು. ಇದು ಹೃದಯದ ಮಾರ್ಪಾಟನ್ನು ಮತ್ತು ಹೃದಯದ ಸುನ್ನತಿಯನ್ನು ಸೂಚಿಸುವುದಾಗಿತ್ತು. (ಧರ್ಮೋಪದೇಶಕಾಂಡ 30:6). ಅದ್ದಕ್ಕಾಗಿಯೇ ಪೌಲನು ಹೀಗೆ ಬರೆಯುತ್ತಾನೆ,ಹೊರಗೆ ಮಾತ್ರ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲ; ಮತ್ತು ಹೊರಗೆ ಶರೀರದಲ್ಲಿ ಮಾತ್ರ ಮಾಡಿರುವ ಸುನ್ನತಿಯು ಸುನ್ನತಿಯಲ್ಲ.

ಆದರೆ ಒಳಗೆ ಯೆಹೊದ್ಯನಾಗಿರುವವನೆ ಯೆಹೂದ್ಯನು ಮತ್ತು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಇದು ಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ, ಆತ್ಮಕ್ಕೆ ಸಂಬಂಧಪಟ್ಟದ್ದೇ; ಇಂಥ ಸುನ್ನತಿಯಿದ್ದವನಿಗೆ ಬರುವ ಹೊಗಳಿಕೆಯು ದೇವರಿಂದಲೇ ಹೊರೆತು ಮನುಷ್ಯರಿಂದ ಬರುವುದಲ್ಲ. (ರೋಮ 2:28,29).

1 ಕೊರಿಂಥ 7:19, ಗಲಾತ್ಯ 5:6, ಮತ್ತು 6:15 ಇಂತಹ ವಚನಗಳು ಹೊಸ ಒಡಂಬಡಿಕೆಯಲ್ಲಿ ಸುನ್ನತಿಯ ಬದಲಿಗೆ ದೀಕ್ಷಾಸ್ನಾನವು ಬಂದಿತು ಇದು ಮಾನಸಾಂತರದ ಸಂಕೇತವಾಗಿದೆ ಎಂದು ತಿಳಿಸುತ್ತವೆ, ಹೊಸ ಸೃಷ್ಟಿ ಪಾಪದ ಪಾಲಿಗೆ ಸತ್ತು ಹೊಸ ಜೀವನಕ್ಕೆ ಬದುಕುವುದಾಗಿದೆ. (ರೋಮ 6:3,4 ನೋಡಿರಿ), ಇದಕ್ಕಾಗಿಯೇ ಪೌಲನು ಸುನ್ನತಿಯು ಇನ್ನೂ ಮುಂದೆ ಪ್ರಾಮುಖ್ಯವಲ್ಲ ಮತ್ತು ಪ್ರೀತಿಯಲ್ಲಿ ಕೆಲಸ ಮಾಡುವ ನಂಬಿಕೆ ಮತ್ತು ಆಜ್ಞೆಗಳನ್ನು ಕೈಕೊಂಡು ನಡೆಯುವುದು ಬಹಳ ಪ್ರಾಮುಖ್ಯವಾಗುತ್ತದೆ.

ದೇವರು ತನ್ನ ಜನರನ್ನು ಗುರುತಿಸಲು ಬಹಿರಂಗವಾಗಿ ಕೊಟ್ಟಿರುವ ಎರಡನೇಯ ಸೂಚನೆ ಏನು ಮತ್ತು ಅದನ್ನು ಯಾಕೆ ನೀಡಲಾಗಿದೆ? (ವಿಮೋಚನೆಕಾಂಡ 31:13,17; ಯೇಹೇಜ್ಕೆಲನು 20:12,20)

______________________________

______________________________

ಸಬ್ಬತ್ತು ಕೂಡ ಸೃಷ್ಟಿಯಷ್ಟು ಹಳೆಯದಾಗಿದೆ (ಆದಿಕಾಂಡ 2:2,3) ಸುನ್ನತಿಯು ಅಬ್ರಹಾಮನ ಕಾಲದಿಂದ ಆರಂಭವಾಗುತ್ತದೆ. ಆದ್ದರಿಂದ ಯೇಸು ಆದಿಕಾಂಡವನ್ನು ಉಲ್ಲೇಖಿಸಿ ಸಬ್ಬತ್ ದಿನವು ಮನುಷ್ಯರಿಗೋಸ್ಕರ ಉಂಟಾಯಿತು (ಮಾರ್ಕ 2:27). ಇದು ನಾವು ಸೃಷ್ಟಿಯ ಮೂಲಕ ಅಂದರೆ ಆತನು ನಮ್ಮನ್ನು ಸೃಷ್ಟಿಸಿದ್ದಾನೆ ಮತ್ತು ವಿಮೋಚನೆಯ ಮೂಲಕ ಯಾಕೆಂದರೆ ಆತನು ನಮ್ಮನ್ನು ನೀತಿವಂತರೆಂದು ನಿರ್ಣಯಿಸಿದ್ದಾನೆ ಮತ್ತು ನಮ್ಮನ್ನು ಪರಿಶುದ್ದಪಡಿಸುತ್ತಿದ್ದಾನೆ, ದೇವರಿಗೆ ಸೇರಿದ್ದೇವೆ ಎಂಬುದನ್ನು ತೋರಿಸುತ್ತದೆ. ಇದರಿಂದ ಸುನ್ನತಿಯು

ಅಷ್ಟು ಪ್ರಾಮುಖ್ಯವಲ್ಲ ಎಂದು ಪೌಲನು ಹೇಳಿದರೂ ದೇವರ ಆಜ್ಞೆಗಳನ್ನು ಕೈಕೊಂಡು ನಡೆಯುವುದು (ಇದರಲ್ಲಿ ಸಬ್ಬತ್ ಕೂಡ ಸೇರಿದೆ) ಈಗಲೂ ಪ್ರಾಮುಖ್ಯವಾಗಿದೆ ಎಂದು ಹೇಳುತ್ತಾನೆ (ಇಬ್ರಿಯರಿಗೆ 4:9).

**ನಿಮ್ಮ ಹೃದಯದಲ್ಲಿ ಸುನ್ನತಿಯನ್ನು ಹೊಂದಿದ್ದಿರಿ ಎಂಬುದನ್ನು ನಿಮ್ಮ ಆಲೋಚನೆಗಳು ಮತ್ತು ಉದ್ದೇಶಗಳು ಹೇಗೆ ತೋರಿಸುತ್ತವೆ?**

**ಸೋಮವಾರ**

## ಮೃಗ ಮತ್ತು ತಪ್ಪಾದ ಆರಾಧನೆ

**ಈ ವಚನಗಳನ್ನು ಓದಿರಿ. ಮೃಗದ ಗುರುತನ್ನು ತಪ್ಪಿಸಿಕೊಳ್ಳುವುದು ಎಷ್ಟು ಪ್ರಾಮುಖ್ಯವಾದದ್ದು ಎಂಬುದರ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ?** ಪ್ರಕಟಣೆ 13:17; 14:9,10; 16:2.

ಏನೂ ಬೆರಸದೆ ದೇವರ ರೌದ್ರವನ್ನು ಹೊಂದುವುದು, ಕೊನೆಯ ಏಳು ಉಪದ್ರವಗಳನ್ನು ಹೊಂದುವುದು ಮತ್ತು ಕೊನೆಯಲ್ಲಿ ಅಗ್ನಿಯ ಸರೋವರದಲ್ಲಿ ಬೀಳುವುದು. ಇದಕ್ಕೆ ವಿರುದ್ದವಾಗಿ ಮೃಗದ ಗುರುತನ್ನು ಹೊಂದದೆ ಇರುವವರು ಗಾಜಿನ ಸಮುದ್ರದ ಮೇಲೆ ನಿಂತು ದೇವರ ಮತ್ತು ಯಜ್ಞದ ಕುರಿಯಾದಾತನ ಹಾಡನ್ನು ಹಾಡುವರು!

ಯಾರು ಹೊಂದಲು ಇಷ್ಟ ಪಡದಿರುವ ಈ ಗುರುತು ಯಾವುದು? ಈ ಮೇಲಿನ ವಚನಗಳು ಸ್ಪಷ್ಟವಾಗಿ ಹೇಳುವಂತೆ ಇದು ಸುಳ್ಳಿನ ಆರಾಧನೆಯಾಗಿದೆ. ಇದರ ಜೊತೆಗೆ, ನಾವು ಹಿಂದಿನ ಪಾಠದಲ್ಲಿ ನೋಡಿದ ಹಾಗೆ ದಾನಿಯೇಲ 7, ರ ನಾಲ್ಕನೇಯ ಮೃಗವು ತನ್ನ ಮುಂದಿನ ಹಂತದಲ್ಲಿ (ಪ್ರಕಟನೆ 13 ರಲ್ಲಿ ತೋರಿಸುವ ಪ್ರಕಾರ ಸಮುದ್ರದ ಮೃಗವಾಗಿದೆ), ಇದು ಸಮಯಗಳನ್ನು ಮತ್ತು ಆಜ್ಞೆಗಳನ್ನು ಬದಲಾಯಿಸಲು ಪ್ರಯತ್ನಮಾಡುತ್ತದೆ. (ದಾನಿಯೇಲ 7:25).

ಆಜ್ಞೆಗಳಲ್ಲಿ ಒಂದು ಆಜ್ಞೆಯನ್ನು ಬದಲಾಯಿಸಲು ಪ್ರಯತ್ನಿಸಿದ್ದರೆ ಅದು ಸಬ್ಬತ್ತಿನ ಆಜ್ಞೆ, ನಾಲ್ಕನೇಯ ಆಜ್ಞೆ– ಹತ್ತು ಆಜ್ಞೆಗಳಲ್ಲಿ ಇದೊಂದು ಮಾತ್ರ ಸಮಯ ಮತ್ತು ಪರಲೋಕ ಮತ್ತು ಭೂಲೋಕಗಳನ್ನು ಹಾಗೂ ಸಮುದ್ರವನ್ನು ಅದರಲ್ಲಿರುವ ಸಮಸ್ತವನ್ನು ಸೃಷ್ಟಿಸಿ ಏಳನೇಯ ದಿನದಲ್ಲಿ ವಿಶ್ರಮಿಸಿಕೊಂಡನು ಎಂದು ಸ್ಪಷ್ಟವಾಗಿ ತಿಳಿಸುತ್ತದೆ. (ವಿಮೋಚನೆಕಾಂಡ 20:11).

ಮುಖ್ಯವಾಗಿ, ಮೊದಲನೇಯ ದೂತನ ಸಂದೇಶವು ಈ ಆಜ್ಞೆಯನ್ನು ತೋರಿಸುತ್ತದೆ ಮತ್ತು ನಾವು ದೇವರನ್ನು ಮಾತ್ರ ನಮ್ಮ ಸೃಷ್ಟಿಕರ್ತನಾಗಿ ಆರಾಧಿಸಬೇಕು ಎಂಬುದಾಗಿ ಹೇಳುತ್ತದೆ. ಪ್ರಕಟಣೆ 12–14 ರಲ್ಲಿ ಹೇಳಿರುವ ಏಳು ವಚನಗಳು ಆರಾಧನೆಯನ್ನು ಸೂಚಿಸುತ್ತವೆ. ಈ ವಚನವು (14:7) ಮಾತ್ರ ನಿಜವಾದ ಆರಾಧನೆಯ ಕುರಿತಾಗಿ ಹೇಳುತ್ತದೆ; ಮಿಕ್ಕ ಆರು ವಚನಗಳು ಮೃಗ ಮತ್ತು ಅದರ ವಿಗ್ರಹವನ್ನು ಆರಾಧಿಸುವ ತಪ್ಪಾದ ಆರಾಧನೆಯ ಕುರಿತಾಗಿ ಹೇಳುತ್ತದೆ. (ಪ್ರಕಟಣೆ 13:4,8,12,15,14:9,11)ಮೂರನೆಯ ದೂತನ ಸಂದೇಶದ ನಂತರ ಮೃಗದ ಆರಾಧನೆಯಲ್ಲಿ ತೊಡಗಿಸಿಕೊಂಡವರ ಬರುವ ಶಿಕ್ಷೆ ಮತ್ತು ದೇವರ ನಿಜವಾದ ಆರಾಧನೆಯನ್ನು ಮಾಡುವವರಿಗೆ ಉಂಟಾಗುವ ಫಲದ ಕುರಿತಾಗಿ ಹೇಳುತ್ತದೆ. ಇದರಲ್ಲಿ ದೇವರ ಆಜ್ಞೆಗಳನ್ನೂ ಯೇಸುವಿನ ಮೇಲಣ ನಂಬಿಕೆಯನ್ನೂ ಕೈಕೊಂಡು ನಡೆಯುತ್ತಿರುವ ದೇವರ ಜನರ ತಾಳ್ಮೆಯು ತೋರಿಬರುತ್ತದೆ. (ಪ್ರಕಟಣೆ 14:12).

ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಈ ಮೂರು ದೂತರ ಸಂದೇಶಗಳು ಜನರನ್ನು ಎರಡು ಗುಂಪುಗಳಾಗಿ ವಿಂಗಡಿಸುತ್ತದೆ:ದೇವರನ್ನು ಸೃಷ್ಟಿಕರ್ತನಾಗಿ ಆರಾಧಿಸುತ್ತಾ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವರು (ಇದರಲ್ಲಿ ನಾಲ್ಕನೇಯ ಆಜ್ಞೆಯು ಕೂಡ ಸೇರಿರುತ್ತದೆ), ಮೃಗವನ್ನು ಮತ್ತು ಅದರ ವಿಗ್ರಹವನ್ನು ಆರಾಧಿಸುವವರು. ಈ ರೀತಿಯ ತಪ್ಪಾದ ಆರಾಧನೆಯು. ದೇವರ ಆರಾಧನೆಗೆ ವಿರುದ್ಧವಾಗಿದೆ.

**ಆರಾಧನೆ ಮತ್ತು ಪ್ರಾಮಾಣಿಕತೆಯ ನಡುವಿನ ಸಂಬಂಧವನ್ನು ಕುರಿತಾಗಿ ಆಲೋಚಿಸಿರಿ. ದೇವರಿಗೆ ನಮ್ಮ ಪ್ರಾಮಾಣಿಕತೆಯನ್ನು ತೋರಿಸಲು ಯಾವ ಒಂದು ವಿಷಯವು ಬಹಳ ಮುಖ್ಯವಾಗುತ್ತದೆ?**

**ಮಂಗಳವಾರ**

## ದೇವರ ಮುದ್ರೆ

ಮುದ್ರೆ, ಸಹಿಯ ಹಾಗೆ, ಒಂದು ಪತ್ರವನ್ನು ಅಧಿಕೃತಗೊಳಿಸುತ್ತದೆ. ಹಳೆಯ ಕಾಲದಲ್ಲಿ ಮೃದುವಾದ ಮೇಣ ಅಥವಾ ಮಣ್ಣಿನ ಮುದ್ರೆಯನ್ನು ಪತ್ರದ ಮೇಲೆ ಹಾಕುವುದರ ಮೂಲಕ ಆ ಪತ್ರದ ಯಜಮಾನತ್ವ ಮತ್ತು ಅದರ ಹಿಂದಿನ ಅಧಿಕಾರವನ್ನು ತೋರಿಸಲಾಗುತ್ತಿತ್ತು.

**ದೇವರ ಮುದ್ರೆ ಯಾವುದು, ಮತ್ತು ಅದನ್ನು ಹೇಗೆ ಹಾಗೂ ಯಾವಾಗ ನೀಡಲಾಗುವುದು**? ಎಫೆಸ 1:13,14; 4:30; 2 ತಿಮೋಥಿ 2:19; ಪ್ರಕಟಣೆ 7:1–14 14:1.

ದೇವರ ಮುದ್ರೆಯು ಆತನ ಯಜಮಾನತ್ವ ಮತ್ತು ಆತನು ಜನರಿಗೆ ಆತನು ನೀಡುವ ಸಂರಕ್ಷಣೆಯಾಗಿದೆ. ಪೌಲನು ಈ ಮುದ್ರೆಯನ್ನು ಮಾನಸಾಂತರ ಮತ್ತು ಪರಿಶುದ್ಧಾತ್ಮನ ವರವನ್ನು ಪಡೆಯುವುದರ ಜೊತೆಗೆ ಸೇರಿಸುತ್ತಾನೆ. ಆತನು ಈ ಬಹುಮಾನವನ್ನು ಎಲ್ಲಾ ವಿಶ್ವಾಸಿಗಳಿಗೂ ದೇವರಲ್ಲಿ ಸಿಗುವ ಸಂಪೂರ್ಣವಾದ ವಿಮೋಚನೆ ಮತ್ತು ಭವಿಷ್ಯದಲ್ಲಿ ಅವರು ಯೇಸುಕ್ರಿಸ್ತನಲ್ಲಿ ಬರುವಾಗ ಅವರು ಹೊಂದುವ ರಕ್ಷಣೆಯು "ಠೇವಣಿ" ಅಥವಾ "ಮೊದಲ ಕಂತು" ಎಂಬುದಾಗಿ ಹೇಳುತ್ತಾನೆ.

ಪ್ರಕಟನೆಯು ಪುಸ್ತಕದಲ್ಲಿ ಎರಡನೇಯ ಬರೋಣಕ್ಕೆ ಮುನ್ನ ನಡೆಯುವ ಮತ್ತೊಂದು ಮುದ್ರಣೆಯ ಕುರಿತಾಗಿ ತಿಳಿಸುತ್ತದೆ. ಈ ಕೊನೆಯ ಮುದ್ರೆಯು

144, 000 ಜನರಿಗೆ ಪರಿಶುದ್ದಾತ್ಮನ ಹಿಂಗಾರಿನ ಮಳೆಯ ಸಮಯದಲ್ಲಿ ನೀಡಲಾಗುವುದು. ಅವರ ಮೇಲೆ ದೇವರ ಹೆಸರು (ಅಥವಾ ಸಹಿ) ಅವರ ಹಣೆಯ ಮೇಲೆ ಇರುತ್ತದೆ. ಪರಿಶುದ್ದಾತ್ಮನ ಕ್ರಿಯೆಗಳಿಂದ ಅವರು ದೇವರ ಸ್ವಭಾವವನ್ನು ತಮ್ಮ ಜೀವನದಲ್ಲಿ ತೋರಿಸುತ್ತಾರೆ.

**ದೇವರ ಮುದ್ರೆ ಮತ್ತು ಮೃಗದ ಗುರುತಿಗೆ ಇರುವ ವ್ಯತ್ಯಾಸವನ್ನು ನೋಡಿರಿ. ಇಲ್ಲಿ ಯಾವ ವ್ಯತ್ಯಾಸಗಳನ್ನು ತಿಳಿಸಲಾಗಿದೆ.**? ಪ್ರಕಟಣೆ 7:3, 14;9.

_________________________________________________________________________________________

_________________________________________________________________________________________

ಮುದ್ರೆಯನ್ನು ದೇವರ ನಿಜವಾದ ಆರಾಧಕರಿಗೆ ನೀಡಲಾಗುತ್ತದೆ ಮತ್ತು ಮೃಗವನ್ನು ಆರಾಧಿಸುವವರಿಗೆ ಮೃಗದ ಗುರುತನ್ನು ನೀಡಲಾಗುವುದು. ಮುದ್ರೆಯನ್ನು ಹಣೆಯ ಮಾತ್ರ ನೀಡಲಾಗುವುದು ಇದು ದೇವರು ನಮಗೆ ಅಜ್ಞಾಪಿಸಿದ ರೀತಿಯಲ್ಲಿ ಆತನನ್ನು ಆರಾಧಿಸಲು ನಾವು ಮನಸ್ಸಿನಲ್ಲಿ ನಿರ್ಧಾರ ಮಾಡಿಕೊಂಡಿದ್ದೇವೆ ಎಂದು ತೋರಿಸುತ್ತದೆ. ಗುರುತನ್ನು ಹಣೆಯ ಮೇಲೆ ಅಥವಾ ಕೈ ಮೇಲೆ ನೀಡಲಾಗುವುದು. ಇದರ ಅರ್ಥವೆಂದರೆ ಜನರು ಮೃಗವನ್ನು ಆರಾಧಿಸಲು ಎರಡು ಕಾರಣಗಳನ್ನು ನೀಡಬಹುದು. ಅವರ ಮನಸ್ಸಿನಲ್ಲಿ ಅಂಗಿಕರಿಸಿರಬಹುದು, ಇದರಿಂದ ಅವರು ನಿಜವಾದ ದೇವರನ್ನು ಆರಾಧಿಸುತ್ತಿದ್ದೇವೆ ಎಂದು ಭಾವಿಸುತ್ತಾರೆ ಅಥವಾ ಅವರು ಕೊಳ್ಳಲು ಮತ್ತು ಮಾರಲು ಸಾಧ್ಯವಾಗುವುದಿಲ್ಲ ಹಾಗೂ ಕೊಲ್ಲಲ್ಪಡುವರು ಎಂಬ ಭಯದಿಂದ ಎಲ್ಲರ ಜೊತೆಯಲ್ಲಿ ಈ ಗುರುತನ್ನು ಹೊಂದುತ್ತಾರೆ. (ಪ್ರಕಟಣೆ 13:17,15).

ಲೋಕದ ಆಚಾರಗಳನ್ನು ಅನುಸರಿಸಿ ನಡೆಯುವವರು ಲೋಕದ ಗುರುತು ಅಥವಾ ಮೃಗದ ಗುರುತನ್ನು ಹೊಂದಲು ಸಿದ್ದರಾಗುತ್ತಿದ್ದಾರೆ. ಯಾರು ಸ್ವಾರ್ಥವನ್ನು ಪ್ರೀತಿಮಾಡುವುದಿಲ್ಲವೋ, ದೇವರ ಮುಂದೆ ತಮ್ಮನ್ನು ತಾವು ತಗ್ಗಿಸಿಕೊಂಡು ಸತ್ಯವನ್ನು ಅನುಸರಿಸಿ ನಡೆದುಕೊಂಡು ತಮ್ಮ ಆತ್ಮಗಳನ್ನು

ಶುದ್ಧಿಮಾಡಿಕೊಳ್ಳುತ್ತಾರೋ ಅವರು ಪರಲೋಕದ ಗುರುತನ್ನು ಹೊಂದಿಕೊಂಡು ದೇವರ ಮುದ್ರೆಯನ್ನು ತಮ್ಮ ಹಣೆಯ ಮೇಲೆ ಹೊಂದಲು ಸಿದ್ದರಾಗಿದ್ದಾರೆ. **ಎಲೆನ್ ಜಿ ವೈಟ್, ಸಭೆಗೆ ಸಾಕ್ಷಿಗಳು, ಸಂಪುಟ 5, ಪುಟ 216.**

**ಬುಧವಾರ**

## ಮೃಗದ ಗುರುತು

ಈ ಮೃಗದ ಗುರುತು ಯಾವುದು ಇದನ್ನು ನಾವು ಯಾಕೆ ಪಡೆಯಬಾರದು? ಈ ಹಿಂದಿನ ಪಾಠಗಳಲ್ಲಿ ನಾವು ಓದಿದ ಹಾಗೆ ದಾನಿಯೇಲ 7 ರಲ್ಲಿ ಕಾಣುವ ನಾಲ್ಕನೆಯ ಮೃಗದ ಶಕ್ತಿ ತನ್ನ ಮುಂದಿನ ಹಂತದಲ್ಲಿ (ಪ್ರಕಟನೆ 13 ರಲ್ಲಿ ಸಮುದ್ರದ ಮೃಗಕ್ಕೆ ಹೋಲಿಸಲಾಗಿದೆ) ಕಾಲಗಳನ್ನು ಮತ್ತು ಆಜ್ಞೆಗಳನ್ನು ಬದಲಾಯಿಸಲು ಆಲೋಚನೆ ಮಾಡುತ್ತದೆ. (ದಾನಿಯೇಲ 7:25). ಅದು ಬದಲಾಯಿಸಲು ನೋಡುವ ಒಂದು ಆಜ್ಞೆಯೆಂದರೆ ಸಬ್ಬತ್ತಿನ ಆಜ್ಞೆ, ನಾಲ್ಕನೇಯ ಆಜ್ಞೆ, ಪರಲೋಕವನ್ನು ಮತ್ತು ಭೂಲೋಕವನ್ನು, ಸಮುದ್ರವನ್ನು, ಮತ್ತು ಅದರಲ್ಲಿರುವ ಸಮಸ್ತವನ್ನು ನಿರ್ಮಿಸಿ ಏಳನೇಯ ದಿನದಲ್ಲಿ ವಿಶ್ರಮಿಸಿಕೊಂಡನು (ವಿಮೋಚನೆಕಾಂಡ 20:11) ಎಂದು ಹೇಳುವ ಏಕೈಕ ಆಜ್ಞೆಯಾಗಿದೆ.

ಅದೇ ಸಮಯದಲ್ಲಿ ಮೊದಲನೇಯ ದೂತನ ಸಂದೇಶವು ತನ್ನ ಓದುಗರನ್ನು ಇದೇ ಆಜ್ಞೆಯ ಕಡೆಗೆ ನಡೆಸುತ್ತದೆ, ಮೃಗವು ಬದಲಾವಣೆ ಮಾಡಲು ಬಯಸುವ ಒಂದು ಆಜ್ಞೆಯು ನಾವು ದೇವರನ್ನು ಮಾತ್ರ ಸೃಷ್ಟಿಕರ್ತನೆಂದು ಆರಾಧಿಸಬೇಕು ಎಂದು ಸೂಚಿಸುತ್ತದೆ. ನಂತರ, ಮೃಗದ ಮತ್ತು ಅದರ ವಿಗ್ರಹ ವನ್ನು ಆರಾಧಿಸುವವರಿಗೆ ಆಗುವ ಶಿಕ್ಷೆಯ ಕುರಿತಾಗಿ ಎಚ್ಚರಿಸಿದ ನಂತರ ದೇವರು ನಂಬಿಕೆಯ ಜನರ ಕುರಿತಾಗಿ ವಚನ 12 ರಲ್ಲಿ ಚಿತ್ರಿಸಲಾಗಿದೆ.

ಪ್ರಕಟಣೆ 14:12 ನ್ನು ಓದಿರಿ. ಈ ತಕ್ಷಣದ ಹಿನ್ನಲೆಯನ್ನು ನೋಡುವಾಗ ಇಲ್ಲಿ ಚಿತ್ರಿಸಲಾಗಿರುವ ದೇವ ಜನರ ವಿಷಯದಲ್ಲಿ ಕೊನೆಯ ಕಾಲದ ಘಟನೆಗಳಲ್ಲಿ

ಸಬ್ಬತ್ತು ಎಷ್ಟು ಪ್ರಾಮುಖ್ಯವಾಗುತ್ತದೆ ಎಂದು ಅರ್ಥಮಾಡಿಕೊಳ್ಳಲು ಇದು ಹೇಗೆ ಸಹಾಯ ಮಾಡುತ್ತದೆ?

---

ಈ ವಚನವು ತಿಳಿಸುವ ಹಾಗೆ ಇದರಲ್ಲಿ ದೇವರ ಆಜ್ಞೆಗಳನ್ನೂ ಯೇಸುವಿನ ಮೇಲಣ ನಂಬಿಕೆಯನ್ನೂ ಕೈಕೊಂಡು ನಡೆಯುತ್ತಿರುವ ದೇವಜನರ ತಾಳ್ಮೆಯು ತೋರಿಬರುತ್ತದೆ. (ಪ್ರಕಟಣೆ 14:12).

ನಾವು ಈ ಹಿಂದೆ ನೋಡಿದ ಹಾಗೆ ದೇವರ ಆಜ್ಞೆಗಳಲ್ಲಿ ನಾಲ್ಕನೇಯ ಆಜ್ಞೆಯನ್ನು ಅಂದರೆ ಸಬ್ಬತ್ತಿನ ಆಜ್ಞೆ ಇದು ದೇವರನ್ನು ಸೃಷ್ಟಿಕರ್ತನು ಮತ್ತು ಆರಾಧನೆಗೆ ಆತನು ಮಾತ್ರವೇ ಯೋಗ್ಯನು ಎಂದು ತಿಳಿಸುತ್ತದೆ. ಆದ್ದರಿಂದ ಮೃಗದ ಗುರುತು ಭಾನುವಾರದ ಆರಾಧನೆಯ ಜೊತೆಗೆ ಸೇರಿಕೊಂಡಿರುವುದನ್ನು ಅನೇಕರು ಗಮನಿಸುವುದರಲ್ಲಿ ಅಚ್ಚರಿಪಡಬೇಕಾಗಿಲ್ಲ, ಇದು ಸಬ್ಬತ್ತಿನ ನಕಲಿ ಮತ್ತು ಸತ್ಯವೇದ ನಮಗೆ ತಿಳಿಸದ ಆರಾಧನೆಯಾಗಿದೆ ಮತ್ತು ಸತ್ಯವೇದವು ನಮಗೆ ತಿಳಿಸುವ ನಾಲ್ಕನೇಯ ಆಜ್ಞೆಗೆ ವಿರುದ್ದವಾಗಿದೆ.

ಹಾಗಾದರೆ ಭಾನುವಾರ ಆರಾಧನೆ ಮಾಡುವ ಎಲ್ಲಾ ಕ್ರೈಸ್ತರು ಕೂಡ ಮೃಗದ ಗುರುತನ್ನು ಈಗ ಹೊಂದಿದ್ದಾರೆಯೇ? ಇಲ್ಲ. ಪ್ರಕಟನೆ 13:15 ರ ಪ್ರಕಾರ ಯಾರು ಈ ತಪ್ಪಾದ ಆರಾಧನೆಯಲ್ಲಿ ಭಾಗವಹಿಸುವುದಿಲ್ಲವೋ ಅವರು ಕೊಲ್ಲಲ್ಪಡುವರು. ಇದು ಮರಣ– ಮತ್ತು ಜೀವನದ ವಿಷಯವಾಗುತ್ತದೆ. ಕೊನೆಯದಾಗಿ, ಈ ಘಟನೆಗಳು ಕೊನೆಯ ಹಂತವನ್ನು ತಲುಪದೇ ಇದ್ದರೂ ಕೂಡ ಈ ಕೊನೆಯ ಪರೀಕ್ಷೆಯು ಮುಗಿಯುವ ತನಕ ಮೃಗದ ಗುರುತನ್ನು ಹೊಂದಲು ಸಾಧ್ಯವಿಲ್ಲ. ಆದ್ದರಿಂದ ಯಾರು ಕೂಡ ಈ ಮೃಗದ ಗುರುತನ್ನು ಇನ್ನೂ ಕೂಡ ಹೊಂದಿಲ್ಲ.

**ದೇವರ ಆಜ್ಞೆಗಳು, ಯೇಸುವಿನ ಮೇಲಣ ನಂಬಿಕೆ. ಈ ಗುರುತುಗಳು ಯಾಕೆ ಈಗಲೂ ಕೂಡ ನಿಜವಾದ ಕ್ರೈಸ್ತರಗುಣಲಕ್ಷಣಗಳಾಗಿವೆ?**

**ಗುರುವಾರ**

# ಸಬ್ಬತ್ತಿನ ಮುದ್ರೆ

ನಾವು ನೋಡಿದ ಹಾಗೆ, ಚರಿತ್ರೆಯುದ್ದಕ್ಕೂ ಏಳನೇಯ ದಿನದ ಸಬ್ಬತ್ತು ದೇವರ ಜನರ ಗುರುತಾಗಿ ಕಾಣುತ್ತದೆ. ಆದಾಮ ಮತ್ತು ಹವ್ವಳಿಂದ ಹಿಡಿದು ಇಸ್ರಾಯೇಲ್ಯರ ಸಮಯದವರೆಗೂ ಅದು ಮುಂದುವರೆಯುತ್ತದೆ. ಹೊಸ ಒಡಂಬಡಿಕೆಯ ಸಭೆಯು ಕೂಡ ಈ ಅಭ್ಯಾಸವನ್ನು ಮುಂದುವರೆಸಿಕೊಂಡು ಯೇಸು ಮತ್ತು ಆತನ ಶಿಷ್ಯರು, ಮತ್ತು ಕೊನೆಯ ಕಾಲದ ಜನರು ಇದನ್ನು ದೇವರ ಆಜ್ಞೆಗಳನ್ನು ಕೈಕೊಂಡು ನಡೆಯುವವರು ಮತ್ತು ಯೇಸುವಿನ ಮೇಲಣ ನಂಬಿಕೆಯ ಗುರುತಾಗಿ ನೋಡುವರು.(ಪ್ರಕಟಣೆ 14:12)

**ಸಬ್ಬತ್ತು ಯಾಕೆ ಅಷ್ಟೊಂದು ಮುಖ್ಯವಾಗಿದೆ, ಮತ್ತು ಕ್ರೈಸ್ತವರಿಗೆ ಇದು ಯಾಕೆ ಅಷ್ಟೊಂದು ಪ್ರಾಮುಖ್ಯವಾಗಿದೆ.**? ವಿಮೋಚನೆಕಾಂಡ 20:8–11; ಇಬ್ರಿಯರಿಗೆ 4:9,10.

ಸಬ್ಬತ್ತು ಹತ್ತು ಆಜ್ಞೆಗಳ ಹೃದಯ ಭಾಗದಲ್ಲಿ ಕಾಣಿಸುತ್ತದೆ. ಇದನ್ನು ಸೃಷ್ಟಿಕರ್ತನು ತನ್ನ ಗುರುತು ಮತ್ತು ಮುದ್ರೆ ಹಾಗೂ ತನ್ನ ಅಧಿಕಾರವಾಗಿ ನೀಡಿದ್ದಾನೆ. ಇದು ಆತನನ್ನು ನಿಮ್ಮ ದೇವರಾದ ಕರ್ತನು ಎಂಬ ಹೆಸರಿನಿಂದ ಗುರುತಿಸುತ್ತದೆ. ಇದು ಆತನ ಅಧಿಕಾರದ ವ್ಯಾಪ್ತಿಯನ್ನು ತೋರಿಸುತ್ತದೆ, ಪರಲೋಕ ಮತ್ತು ಭೂಲೋಕ, ಸಮುದ್ರ ಮತ್ತು ಅದರಲ್ಲಿರುವ ಸಮಸ್ತವನ್ನು ಇದು ಆತನ ಅಧಿಕಾರಕ್ಕೆ ಇರುವ ಆಧಾರವನ್ನು ತೋರಿಸುತ್ತದೆ, ಯಾಕೆಂದರೆ ಆರು ದಿನಗಳಲ್ಲಿ ದೇವರು ಆಕಾಶಗಳನ್ನು ಮತ್ತು ಭೂಮಿಯನ್ನು ..... ಏಳನೇಯ ದಿನದಲ್ಲಿ ವಿಶ್ರಮಿಸಿಕೊಂಡನು.

ಹೊಸ ಒಡಂಬಡಿಕೆಯು ಯೇಸುವನ್ನು ದೇವರು ಸೃಷ್ಟಿಸಿದ ಎಲ್ಲದಕ್ಕೂ ಮೂಲ ಕಾರಣನು ಎಂಬುದಾಗಿ ಹೇಳುತ್ತದೆ (ಯೋಹಾನ 1:1–3; ಕೊಲೆಸ್ಸಿ 1:16; ಇಬ್ರಿಯರಿಗೆ 1:1,2). ಯೇಸುವು ತಾನೇ ಈ ಲೋಕವನ್ನು ಆರು ದಿನಗಳಲ್ಲಿ ಸೃಷ್ಟಿ ಮಾಡಿ ಏಳನೇಯ ದಿನದಲ್ಲಿ ವಿಶ್ರಮಿಸಿಕೊಂಡನು. ಆದ್ದರಿಂದ ಯೇಸುವು ಶುಕ್ರವಾರ ಮಧ್ಯಾಹ್ನ ಶಿಲುಬೆಯ ಮೇಲೆ ತೂಗಾಡಿ ಇನ್ನು ತೀರಿತು (ಯೋಹಾನ 19:30) ಎಂದು ಕೂಗುವುದು ಬಹಳ ಪ್ರಾಮುಖ್ಯವಾಗುತ್ತದೆ. ಆರು ದಿನಗಳ ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಏಳನೇಯ ದಿನದಲ್ಲಿ ಆತನು ಹೇಗೆ ವಿಶ್ರಮಿಸಿಕೊಂಡನೋ, ಅದೇ ರೀತಿಯಲ್ಲಿ ಯೇಸುವು ವಿಮೋಚನೆಯಲ್ಲಿ ನಮ್ಮನ್ನು ಬಿಡಿಸುವ ಕಾರ್ಯವನ್ನು ಮುಗಿಸಿ ಸಬ್ಬತ್ತಿನಲ್ಲಿ ಸಮಾಧಿಯಲ್ಲಿ ವಿಶ್ರಮಿಸಿಕೊಂಡನು. ಆದ್ದರಿಂದ ಸಬ್ಬತ್ತು ಎರಡು ವಿಧದಲ್ಲಿ ಆಶೀರ್ವದಿಸಲ್ಪಟ್ಟಿದೆ. ಮೊದಲನೇಯದಾಗಿ ಸೃಷ್ಟಿಯಲ್ಲಿ ಮತ್ತು ಶಿಲುಬೆಯಲ್ಲಿ. ಆದ್ದರಿಂದಲೇ, ಇಬ್ರಿಯರ ಪುಸ್ತಕದ ಪ್ರಕಾರ, ಸಬ್ಬತ್ತಿನಲ್ಲಿ ವಿಶ್ರಮಿಸುವ ಮೂಲಕ ಕ್ರೈಸ್ತವರು ದೇವರು ತನ್ನ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಂಡಿರುವ ಪ್ರಕಾರ (ಇಬ್ರಿಯರಿಗೆ 4:10). ಅವರು ಕೂಡ ವಿಶ್ರಾಂತಿಯನ್ನು ಪಡೆಯುತ್ತಾರೆ. ಸಬ್ಬತ್ತು ನಮ್ಮನ್ನು ನಾವು ರಕ್ಷಿಸಿಕೊಳ್ಳಲಾರೆವು ಎಂಬ ವಿಚಾರವನ್ನು ಪರಿಪೂರ್ಣವಾಗಿ ತೋರಿಸುವ ಸೂಚನೆಯಾಗಿದೆ. ಇದರಲ್ಲಿ ಮೊದಲಿನಿಂದ ಹಿಡಿದು ಕೊನೆಯವರೆಗೂ ಕೂಡ ನಂಬಿಕೆಯ ಮೂಲಕ ಕ್ರಿಸ್ತನ ಕ್ರಿಯೆಗಳು ರಕ್ಷಣೆಯನ್ನು ಕೊಡುತ್ತವೆ. (ಇಬ್ರಿಯರಿಗೆ 12:2 ನ್ನು ಹೋಲಿಸಿರಿ).

**ಶುಕ್ರವಾರ**

**ಮುಂದಿನ ಆಲೋಚನೆ :** ದೇವರ ಜನರು ಅವರ ಹಣೆಯ ಮೇಲೆ ಮುದ್ರೆಯನ್ನು ಪಡೆಯುವ ಹಾಗೆ ಇದು ಎಲ್ಲರೂ ನೋಡುವ ಅಥವಾ ಕಾಣುವ ಹಾಗೆ ಇರುವ ಮುದ್ರೆಯಲ್ಲ, ಬದಲಿಗೆ ಆಲೋಚನೆಯಲ್ಲಿ ಮತ್ತು ಆತ್ಮದಲ್ಲಿ ಸತ್ಯದಲ್ಲಿ ನಿಲ್ಲುವುದು, ಆದ್ದರಿಂದ ದೇವರ ಜನರು ಶುದ್ದೀಕರಣದ ಮುಂಚೆ ಈ ಮುದ್ರೆಯನ್ನು ಪಡೆಯುತ್ತಾರೆ. ಇದು ಖಂಡಿತವಾಗಿ ಬರುತ್ತದೆ. ಇದಾಗಲೇ

ಇದು ಆರಂಭವಾಗಿದೆ, ದೇವರ ನ್ಯಾಯತೀರ್ಪು ಭೂಮಿಯ ಮೇಲಿದೆ,.... ಇದರಿಂದ ಏನು ಬರುತ್ತಿದೆ ಎಂದು ನಾವು ತಿಳಿಯಬಹುದು. ಎಲೆನ್ ಜಿ ವೈಟ್, ಫೈತ್ ಐ ಲಿವ್ ಬೈ ಪುಟ 285.

ಸಬ್ಬತ್ತು ಪ್ರಾಮಾಣಿಕತೆಯ ಒಂದು ದೊಡ್ಡ ಗುರುತಾಗುತ್ತದೆ, ಮನುಷ್ಯರ ಮೇಲೆ ದೇವರು ತರುವ ಬಹು ದೊಡ್ಡ ಪರೀಕ್ಷೆಯು ಇದಾಗಿದೆ, ಇದು ದೇವರನ್ನು ಯಾರು ಅರಾಧಿಸುತ್ತಾರೋ ಇಲ್ಲವೋ ಎಂಬುದರ ನಡುವಿನ ಗೆರೆಯನ್ನು ಎಳೆಯುವ ವಿಧಾನವಾಗಿದೆ. ಸುಳ್ಳಿನ ಸಬ್ಬತ್ತನ್ನು ಆಚರಿಸುವುದು ದೇಶದ ಆಜ್ಞೆಯ ಜೊತೆಗೆ ಸೇರಿಕೊಂಡಿದ್ದು ಅದು ದೇವರಿಗೆ ವಿರುದ್ಧವಾಗಿದೆ. ಸರಿಯಾದ ಸಬ್ಬತ್ತನ್ನು ಕೈಕೊಂಡು ನಡೆಯುವುದು ಸೃಷ್ಟಿಕರ್ತನಿಗೆ ವಿಧೇಯತೆಯನ್ನು ತೋರಿಸುವುದಾಗಿದೆ. ಒಂದು ವರ್ಗವು ಮೃಗದ ಗುರುತನ್ನು ಹೊಂದಿಕೊಂಡು ಲೋಕದ ಅಧಿಕಾರಕ್ಕೆ ವಿಧೇಯತೆಯನ್ನು ತೋರಿಸಿದರೆ, ಮತ್ತೊಂದು ವರ್ಗವು ದೈವಿಕ ಅಧಿಕಾರವನ್ನು ಅಂಗಿಕರಿಸಿ ದೇವರ ಮುದ್ರೆಯನ್ನು ಹೊಂದುತ್ತದೆ. ಎಲೆನ್ ಜಿ ವೈಟ್ ಮಹಾ ಹೋರಾಟ ಪುಟ 605.

## ಚರ್ಚಿಸಬೇಕಾದ ಪ್ರಶ್ನೆಗಳು

**ಇತರರಿಗೆ ಮೃಗದ ಗುರುತು ಮತ್ತು ದೇವರ ಮುದ್ರೆಯ ಕುರಿತಾಗಿ ಯಾವುದೇ ವಿವಾದವಿಲ್ಲದೆ ನಾವು ಏನು ಹೇಳಬಹುದು? ಉದಾಹರಣೆಗೆ ಇನ್ನೂ ಯಾರೂ ಕೂಡ ಮೃಗದ ಗುರುತನ್ನು ಹೊಂದಿಲ್ಲ ಎಂಬುದರ ಕುರಿತಾಗಿ ನಾವು ಯಾಕೆ ಮಾತನಾಡಬಾರದು?**

1. ಸಬ್ಬತ್ತು ಮತ್ತು ಪರಿಶುದ್ದಾತ್ಮನಿಂದ ಮುದ್ರಿಸಲ್ಪಡುವುದು ಹೇಗೆ ಒಂದಕ್ಕೊಂದು ಸಂಬಂಧ ಹೊಂದಿದೆ?
2. ಆಲೋಚನೆಯಲ್ಲಿ ಮತ್ತು ಆತ್ಮದಲ್ಲಿ ಸತ್ಯದಲ್ಲಿ ನಿಲ್ಲುವುದು, ಎಂಬ ವಿಚಾರವಾಗಿ ಹೆಚ್ಚು ಆಲೋಸಿರಿ. ಇದರ ಅರ್ಥವೇನು?

3. ಆತ್ಮಿಯ ಬಾಬೇಲ್ ನ ಕುರಿತಾಗಿ ಚರ್ಚಿಸಿರಿ, ಅದರ ಮೌಲ್ಯಗಳು ಮತ್ತು ವಿಧಾನಗಳು ದೇವರ ರಾಜ್ಯದ ಮೌಲ್ಯಗಳು ಮತ್ತು ವಿಧಾನಗಳ ಜೊತೆಗೆ ಹೇಗೆ ವಿಬೇಧಿಸುತ್ತವೆ? ಈ ಬಾಬೇಲಿನ ಕೆಲವು ಮೌಲ್ಯಗಳು ಈಗಲೂ ಕೂಡ ಹೇಗೆ  ನಮ್ಮ ಸಭೆಯ ಒಳಗೆ ಬರುತ್ತಿವೆ? ಅವುಗಳನ್ನು ನಾವು ಗುರುತಿಸುವುದು ಹೇಗೆ ಮತ್ತು ಅವುಗಳ ಜೊತೆಯಲ್ಲಿ ನಾವು ಯಾವ ರೀತಿಯಲ್ಲಿ ವ್ಯವಹರಿಸುತ್ತೇವೆ, ಆದರೆ ಕ್ರೈಸ್ತರಾಗಿ ನಾವು ದೇವರ ರಾಜ್ಯದ ಮೌಲ್ಯಗಳನ್ನು  ತೋರಿಸಬೇಕಾಗಿದೆ?